# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಜಾರಿ ನಂ.12-2021** **ಪಿ . ಡಬ್ಲುಃ 2**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಹೆಚ್.ಎಸ್.ಪ್ರಸಾದ್<br>ಕೆ.ಎಂ.ದೊಡ್ಡಿ (ಭಾರತಿ ನಗರ), ಮದ್ದೂರು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 19-12-2023.** |

**ಪಾಟೀ ಸವಾಲುಃ ತೀರ್ಪುಋಣಿದಾರರ ಪರ ವಕೀಲರಾದ ಶ್ರೀ ಕೆ.ಎಸ್.ಎಂ ರವರಿಂದಃ-**

ಸಾಕ್ಷಿಗೆ ನಿಪಿ-5 ಅನ್ನು ತೋರಿಸಿ ಡಿಕ್ರಿದಾರರು ಮತ್ತು ಎಸ್.ಟಿ.ಚಂದ್ರು ರವರ ನಡುವೆ ಆಗಿದ್ದ ಕ್ರಯದ ಕರಾರು ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿರುತ್ತಾರೆ . ನನಗೆ ಓದು-ಬರಹ ಬರುತ್ತದೆ ಎಂದರೆ ಸರಿ. ಸದರಿ ನಿಪಿ-5 ರ ಕ್ರಯದ ಕರಾರು ಪತ್ರದಲ್ಲಿ ಸಾದರಳಯ್ಯನವರನ್ನು 1 ನೇ ಪಾರ್ಟಿ ಎಂದು, ಎಸ್.ಟಿ.ಚಂದ್ರು ರವರನ್ನು 2 ನೇ ಪಾರ್ಟಿ ಎಂದು ನಮೂದು ಮಾಡಲಾಗಿರುತ್ತದೆ ಎಂದರೆ ಸರಿ. ನಿಪಿ-5 ರಲ್ಲಿ 4 ತಿಂಗಳ ಒಳಗಾಗಿ ಉಳಿಕೆ ಹಣವನ್ನು ನೀಡಿದ ಕ್ರಯದ ಕರಾರು ಪತ್ರವನ್ನು ನೋಂದಣಿ ಮಾಡಿಸಿಕೊಳ್ಳಬೇಕು ಎಂದು ನಮೂದು ಇರುತ್ತದೆ ಎಂದರೆ ಸರಿ. ನಿಪಿ-5 ರಲ್ಲಿ ಕ್ರಯದ ನೋಂದಣಿ ಆದ ನಂತರ ಮೇಲ್ಕಂಡ ಎರುಡೂ ವ್ಯಾಜ್ಯಗಳನ್ನು 2 ನೇ ಪಾರ್ಟಿದಾರರೇ ಬಗೆಹರಿಸಿಕೊಳ್ಳಬೇಕು ಎಂಬುದರ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ. ಸಾಕ್ಷಿಗೆ ನಿಪಿ-6 ಅನ್ನು ತೋರಿಸಿ ಇದೇ ಕ್ರಯದ ರದ್ಧತಿ ಪತ್ರ ಎಂದು ಕೇಳಲಾಗಿ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿರುತ್ತಾರೆ. ನಿಪಿ-6 ರ 2 ನೇ ಪುಟದಲ್ಲಿ ನನಗೆ ನಾನು ಪಾವತಿ ಮಾಡಿರುವ ಮುಂಗಡ ಹಣದ ಅವಶ್ಯಕತೆ ಇರುವುದರಿಂದ ಈ ಹಿಂದೆ ಕ್ರಯದ ಕರಾರು ಸಂದರ್ಭದಲ್ಲಿ ಪಾವತಿ ಮಾಡಿರುವ ಮುಂಗಡ ಹಣ ರೂ.10,00,000/- ಗಳನ್ನು ನಾನು ಈ ದಿನ ನಿಮ್ಮಿಂದ ವಿಜಯಾಬ್ಯಾಂಕ್ ಮದ್ದುರು ಶಾಖೆ ಚೆಕ್ ನಂ.315399 ರ ದಿ.03/06/2014 (ಹತ್ತುಲಕ್ಷ) ರೂಗಳನ್ನು ಚೆಕ್ ಮೂಲಕ ಪಡೆದುಕೊಂಡಿರುತ್ತೇನೆ ಎಂದು ನಮೂದು ಇರುತ್ತದೆ ಎಂದರೆ ಸರಿ.

2. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಮೊದಲನೆ ಪುಟದ 1 ನೇ ಖಂಡಿಕೆಯ 8 ನೇ ಸಾಲಿನಲ್ಲಿ "ದಿ.14-09-2012 ರ ಕ್ರಯದ ಕರಾರು ಆದ ನಂತರವೂ ಸದರಿ ಆಸ್ತಿಯ ಮೇಲಿನ ಸಿವಿಲ್ ವ್ಯಾಜ್ಯಗಳು ಇತ್ಯರ್ಥವಾಗದೇ, ಸದರಿ ಪ್ರಕರಣದಲ್ಲಿ ವಾದಿ ಮತ್ತು ಪ್ರತಿವಾದಿಗಳ ನಡುವೆ ವ್ಯಾಜ್ಯ ಉಲ್ಬಣವಾದದ್ದನ್ನು ತಿಳಿದ ಕರಾರುದಾರರಾದ ಎಸ್.ಟಿ.ಚಂದ್ರ ರವರು ದಿ.14/09/2012 ರ ಕ್ರಯದ ಕರಾರನ್ನು ದಿ03-06-2014 ರಂದು ಕ್ರಯದ ಕರಾರು ರದ್ದಾಯಿತಿ ಪತ್ರದ ಮೂಲಕ ಕರಾರು ರದ್ಧಮಾಡಿಕೊಂಡಿರುತ್ತಾರೆ' ಎಂದು ನಮೂದಿಸಿದ್ದು, ಸದರಿ ವಿಚಾರವು ನಿಪಿ-6 ಕ್ರಯದ ರದ್ದಾಯಿತಿ ಪತ್ರದಲ್ಲಿನಮೂದು ಇರುವುದಿಲ್ಲ ಎಂದರೆ ಸರಿ. ನಿಪಿ-5 ರಂತೆ ಕ್ರಯದ ಕರಾರು ಪತ್ರವನ್ನು ಮಾಡಿಕೊಳ್ಳುವ ಸಮಯದಲ್ಲಿಯೇ ಸದರಿ ಕ್ರಯದ ಕರಾರು ಪತ್ರದಲ್ಲಿ ಓ.ಎಸ್.283/12 ಮತ್ತು 27/12 ರ ದಾವೆಗಳ ಬಗ್ಗೆ ನಮೂದು ಮಾಡಲಾಗಿತ್ತು ಎಂದರೆ ಸರಿ. ದಿ.03-06-2014 ರಂದು ಕ್ರಯದ ಕರಾರು ರದ್ದಾಯಿತಿ ಆಗುವ ವೇಳೆಗೆ ಮೇಲ್ಕಂಡ ದಾವೆಗಳನ್ನು ಹೊರತುಪಡಿಸಿ ಸದರಿ ಸ್ವತ್ತಿನ ಬಾಬ್ತು ಬೇರೆ ಯಾವುದಾರು ದಾವಾ ಸಲ್ಲಿಸಿರುವ ವಿಚಾರ ಗೊತ್ತೆ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಓ.ಎಸ್.ನಂ.283/12 ರ ದಾವಾವು ದಿ.28/09/2018 ರಂದು ತೀರ್ಮಾನಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ಪ್ರಮಾಣ ಪತ್ರದಲ್ಲಿ ನಮೂದಿಸಿರುವಂತೆ ದಿ03-06-2014 ರ ವೇಳೆಗೆ ಯಾವುದೇ ವ್ಯಾಜ್ಯಗಳು ಉಲ್ಬಣವಾಗದೇ ಇದ್ದರೂ ವ್ಯಾಜ್ಯಗಳು ಉಲ್ಬಣವಾಗಿತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಪ್ರ.ದ. ನ್ಯಾ ದಂ. ನಂಜನಗೂಡು**